ಇ) ಪ್ರಶ್ನೆಯಲ್ಲಿ (ಆ) ಭಾಗಕ್ಕೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ.—ಮಾನ್ಯ ಮಂತ್ರಿಯವರೇ, ಈ ಪ್ರೈವೇಟ್ ಕಾಲೇಜುಗಳಲ್ಲಿ ಮೊದಲು ಒಂದೂವರೆ, ಎರಡು ಲಕ್ಷ ಡೊನೇಷನ್ ಎಂದು ವಸೂಲಿ ಮಾಡುತ್ತಿದ್ದರು, ಅದರ ಜೊತೆಗೆ ೫ ವರ್ಷದ ಫೀ ಎಂದು ಈ ಪ್ರೈವೇಟ್ ಕಾಲೇಜುಗಳಲ್ಲಿ ವಸೂಲಿ ಮಾಡುತ್ತಿದ್ದಾರೆ. ಅದೂ ಸ್ವಲ್ಪ ಹೆಚ್ಚು ಕಡಿಮೆ ಎರಡು ಲಕ್ಷ ಆಗುತ್ತದೆ ಅಂದರೆ, ಈ ಪ್ರೈವೇಟ್ ಕಾಲೇಜುಗಳಿಗೆ ಯಾರು ಯಾರು ಸೇರುತ್ತಾರೆ, ಅವರಿಗೆ, ಡಬಲ್ ಅಮೌಂಟ್ ಆಗುವ ಪರಿಸ್ಥಿತಿ ಬಂದಿದೆ. ತಾವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಏನು ಪರಿಶೀಲನೆ ಮಾಡುತ್ತೀರಿ ಎಂಬುದನ್ನು ಸ್ವಲ್ಪ ತಿಳಿಸುತ್ತೀರಾ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಈಗ ಪ್ರೈವೇಟ್ ಕಾಲೇಜುಗಳಿಗೆಲ್ಲಾ ಬರೆದಿದ್ದೇವೆ. ಈ ಬೋಧನಾ ಶುಲ್ಕ ಕೊಡುತ್ತಿರುವುದು ಜಾಸ್ತಿಯಾಗಿದೆ ಎಂಬುದು ಅರ್ಥವಾಗಿದೆ. ಇದು ಎಲ್ಲರ ಮನಸ್ಸಿಗೂ ಬಂದಿದೆ, ನಮಗೂ ಗೊತ್ತಾಗಿದೆ. ಇದನ್ನು ಎಲ್ಲರಿಗೂ ತಿಳಿಸಿ, ಇದನ್ನು ಯಾವ ರೀತಿಯಲ್ಲಿ ಕಡಿಮೆ ಮಾಡಬಹುದು ಎಂಬ ಬಗ್ಗೆ ನೀವೆಲ್ಲಾ ತಿಳಿಸಬೇಕೆಂದು ಹೇಳಿದಾಗ ಕೆಲವರು ಉತ್ತರ ಬರೆದಿದ್ದಾರೆ. ಇನ್ನು ಕೆಲವರು ಉತ್ತರ ಬರೆಯಬೇಕಾಗಿದೆ. ಸಾಧ್ಯವಾದಷ್ಟು ಬೇಗ ಉತ್ತರ ತರಿಸಿಕೊಂಡು ಈ ವಿಚಾರದಲ್ಲಿ ನಾವು ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ.—ಅನೇಕ ಸಲ ಮೆರಿಟ್ ಮೇಲೆ ವಿದ್ಯಾರ್ಥಿಗಳು ಸೆಲೆಕ್ಟ್ ಆಗಿರುತ್ತಾರೆ. ಅವರನ್ನೂ ಪ್ರೈವೇಟ್ ಕಾಲೇಜುಗಳಿಗೆ ಅಲಾಟ್ ಮಾಡುತ್ತಾರೆ. ಮೊದಲು ಸರ್ಕಾರದ ಳಿ ಮೆಡಿಕಲ್ ಕಾಲೇಜುಗಳಿಗೆ ಅಲಾಟ್ ಮಾಡುತ್ತಾರೆ. ಆಮೇಲೆ ಪ್ರೈವೇಟ್ ಕಾಲೇಜುಗಳಿಗೆ ಅಲಾಟ್ ಮಾಡುತ್ತಾರೆ. ಈ ರೀತಿ ಅಲಾಟ್ ಮಾಡುವಾಗ, ಅವರು ಮೆರಿಟ್ ಮೇಲೆ ಪಾಸ್ ಆಗಿದ್ದರೂ, ಪ್ರೈವೇಟ್ ಕಾಲೇಜಿಗಳಿಗೆ ಅವರನ್ನು ಅಲಾಟ್ ಮಾಡುವುದರಿಂದ, ಸುಮಾರು ೨ ಲಕ್ಷ ಫೀ ಕೊಡಬೇಕಾಗುತ್ತದೆ. ಆದುದರಿಂದ ಆ ಪ್ರೈವೇಟ್ ಕಾಲೇಜುಗಳಿಗೆ ಬರೆದು, ಗವರ್ನಮೆಂಟ್ ವೆಂಡಿಕಲ್ ಕಾಲೇಜುಗಳಲ್ಲಿ ಎಷ್ಟೆಷ್ಟು ಬೋಧನಾ ಶುಲ್ಕ ಇದೆಯೋ ಅಷ್ಟನ್ನು ಮಾತ್ರ ವಸೂಲಿ ಮಾಡುವುದಕ್ಕಾಗುವುದಿಲ್ಲವೇ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಈ ವಿಷಯವನ್ನೂ ಅವರಿಗೆ ತಿಳಿಸಿ, ನಾವು ಪರಿಶೀಲನೆ ಮಾಡುತ್ತೇವೆ.

ಸರಕಾರದಿಂದ ಬಿಡುಗಡೆ ಮಾಡಿರುವ ವೈದ್ಯಕೀಯ ಸೀಟುಗಳ ಸಂಖ್ಯೆಯ ಬಗ್ಗೆ

೮೨. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ;

ಆ) ಕಳೆದ ೩ ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ವೈದ್ಯಕೀಯ ಸೀಟುಗಳ ಸಂಖ್ಯೆ ಎಷ್ಟು ;

ಇ) ವೈದ್ಯಕೀಯ ಕಾಲೇಜುಗಳಲ್ಲಿ ಕರ್ನಾಟಕದ ವಿದ್ಯಾರ್ಥಿಗಳನ್ನು ಬಿಟ್ಟು ಹೊರ ರಾಜ್ಯಗಳಿಂದ ಬಂದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

ಈ) ಎಲ್ಲ ವೈದ್ಯಕೀಯ ಕಾಲೇಜುಗಳಿಗೆ ಸರ್ಕಾರದಿಂದ ಕೊಡುತ್ತಿರುವ ಹಣದ ಮೊತ್ತ ಎಷ್ಟು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು).—

ಅ) ೧೮ (ಹದಿನೆಂಟು)

ಆ) ಪ್ರತ್ಯೇಕವಾಗಿ ಲಗತ್ತಿಸಲಾಗಿದೆ

ಇ) ಹೊರ ರಾಜ್ಯದಿಂದ ಬಂದಿರುವ ವಿದ್ಯಾರ್ಥಿಗಳ ಸಂಖ್ಯೆ . ೫೬೦೩

ಈ) ೧೩೫೨.೭೪ ಲಕ್ಷ ರೂಪಾಯಿಗಳು.

ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆ ಮಾಡಿರುವ ವೈದ್ಯಕೀಯ ಸೀಟುಗಳ ಸಂಖ್ಯೆಗಳ ವಿವರ

ಸಂ.	ವೈದ್ಯಕೀಯ ಕಾಲೇಜುಗಳ ವಿವರ	೧೯೮೮-೮೯	೧೯೮೯-೯೦	೧೯೯೦-೯೧
	ಸರ್ಕಾರಿ ವೈದ್ಯಕೀಯ ಕಾಲೇಜುಗಳು :—			
೧	ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು	೧೫೫	೨೦೦	೨೦೦
೨	ಮೈಸೂರು ವೈದ್ಯಕೀಯ ಕಾಲೇಜು, ಮೈಸೂರು	೧೮೫	೧೭೫	೧೭೫
೩	ಬಳ್ಳಾರಿ ವೈದ್ಯಕೀಯ ಕಾಲೇಜು, ಬಳ್ಳಾರಿ	೧೮೦	೧೫೦	೧೫೦
೪	ಕರ್ನಾಟಕ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ	೧೮೦	೧೫೦	೧೫೦
	ಖಾಸಗಿ ವೈದ್ಯಕೀಯ ಕಾಲೇಜುಗಳು :—			
೧	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	೨೫೦	೨೫೦	೩೦೦
	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ	೨೫೦	೨೫೦	೨೫೦
೨	ಸೆಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	೬೦	೬೦	೬೦
೩	ಜೆ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	೧೭೫	೧೭೫	೧೭೫
೪	ಎಂ. ಆರ್. ವೈದ್ಯಕೀಯ ಕಾಲೇಜು ಗುಲ್ಬರ್ಗಾ	೨೨೮	೧೫೦	೧೭೫
೫	ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	೨೭೦	೨೫೦	೩೦೦
೬	ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	೧೦೦	೧೦೦	೧೦೦
೭	ಕೆಂಪೇಗೌಡ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	೫೦	೫೦	೧೦೦
೮	ಡಾ. ಬಿ. ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು ಬೆಂಗಳೂರು	೫೦	೫೦	೧೦೦
೯	ಆಲ್ ಅಮಿನ್ ವೈದ್ಯಕೀಯ ಕಾಲೇಜು, ಬಿಜಾಪುರ	೧೨೫	೧೨೦	೧೨೦
೧೦	ಜೆ. ಎಸ್. ಎಸ್. ವೈದ್ಯಕೀಯ ಕಾಲೇಜು, ಮೈಸೂರು	೧೫೦	೨೦೦	೨೦೦
೧೧	ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ತೂರು	೧೫೦	೧೫೦	೧೫೦
೧೨	ಬಿ. ಎಲ್. ಡಿ. ಇ. ಎ. ವೈದ್ಯಕೀಯ ಕಾಲೇಜು, ಬಿಜಾಪುರ	೧೬೦	೧೯೦	೧೬೦
೧೩	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	೧೫೦	೧೫೦	೧೫೦
೧೪	ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	೧೬೦	೧೫೦	೧೫೦

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್ .—ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿದಂಥ ಪ್ರಶ್ನೆಗೆ ೧೮ ಕಾಲೇಜುಗಳು ಈ ರಾಜ್ಯದಲ್ಲಿ ಇವೆಯೆಂದು ಹೇಳಿದ್ದಾರೆ. ಇನ್ನೂ ಎಷ್ಟು ಕಾಲೇಜುಗಳಿಗೆ ಸರ್ಕಾರ ಮಾನ್ಯತೆ ಕೊಡುತ್ತದೆ ಎಂಬುದು ಒಂದು ಪ್ರಶ್ನೆ. ಈ ಮೆಡಿಕಲ್ ಕಾಲೇಜುಗಳಲ್ಲಿ ಕಳೆದ ಮೂರು ವರ್ಷದ ವಿವರವಾದ ವರದಿಯನ್ನು ನೋಡಿದರೆ, ಪ್ರತಿ ವರ್ಷವೂ ಸೀಟುಗಳನ್ನು ಹೆಚ್ಚು ಮಾಡುತ್ತಾ ಬಂದಿದ್ದು, ಈಗಾಗಲೇ ೨೨೫ ಸೀಟುಗಳು ಹೆಚ್ಚಾಗಿವೆ. ಆದರಲ್ಲಿ ಮೆರಿಟ್ ಸೀಟುಗಳು ಎಷ್ಟು ಡೊನೇಷನ್ ಸೀಟುಗಳು ಎಷ್ಟು ? ಇವುಗಳನ್ನು ಹೆಚ್ಚು ಮಾಡುವುದಕ್ಕೆ ಕಾರಣ ಏನು ಎಂಬುದನ್ನು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ .—ಈ ೨೨೫ ಸೀಟ್‌ಗಳಲ್ಲಿ ಮೆರಿಟ್ಸ್ ಸೀಟುಗಳು ಎಷ್ಟು, ಡೊನೇಷನ್ ಸೀಟುಗಳು ಎಷ್ಟು ಎಂಬ ವಿವರವನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಮಲ್ಲಿಕಾರಿಗೌಡ ಎಸ್. ಪಾಟೀಲ್ .—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಹೊರ ರಾಜ್ಯದಿಂದ ಸುಮಾರು ೫,೬೦೦ ಸೀಟುಗಳಿಗೆ ಅವಕಾಶ ಕೊಟ್ಟಿದ್ದೇವೆಂದು ಹೇಳುತ್ತಾರೆ. ಇದರಲ್ಲಿ ಮೆರಿಟ್ ಸೀಟು ಎಷ್ಟು, ಡೊನೇಷನ್ ಸೀಟು ಎಷ್ಟು ? ಹೊರನಾಡ ಕನ್ನಡಿಗರಿಗೆ, ಒಳನಾಡ ಕನ್ನಡಿಗರಿಗೆ ಕೆಲವೊಂದು ಸೀಟುಗಳನ್ನು ೫–೬ ವರ್ಷಗಳಲ್ಲಿ ಏನು ನಿಗದಿ ಮಾಡಿಕೊಟ್ಟಿದ್ದೀರಿ, ಅದರಲ್ಲಿ ಈಗಾಗಲೇ ದುರ್ವ್ಯವಹಾರ ನಡೆದಿದೆ, ಯಾರು ಮಾತೃಭಾಷೆ ಕನ್ನಡ ಇಲ್ಲ, ಅವರು ನಮ್ಮ ರಾಜ್ಯಕ್ಕೆ ಯಾವುದೇ ಸಂಬಂಧ ಇಲ್ಲ. ಅಂತಹವರಿಗೆ ಎಷ್ಟು ಸೀಟು ಕೊಟ್ಟಿದ್ದೀರಿ, ಅವರು ಇನ್ನೂ ಶಿಕ್ಷಣ ಮುಂದುವರಿಸುತಿದ್ದಾರೆ, ಇವರ ಬಗ್ಗೆ ಕಾನೂನು ಕ್ರಮ ಏನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ .—ಕಾನೂನು ಕ್ರಮ ಎಲ್ಲಾದರೆಂತೆ ಇದಕ್ಕೂ ಇದೆ. ಕೆಲವು, ಗೈಡ್‌ಲೈನ್ಸ್ ಇದೆ, ಆ ಗೈಡ್‌ಲೈನ್ಸ್ ಪ್ರಕಾರ ಕೊಡಬೇಕಾಗುತ್ತದೆ. ನಾನು ಮೊದಲೇ ಹೇಳಿದ ಹಾಗೆ ಮೆರಿಟ್ ವಿದ್ಯಾರ್ಥಿಗಳು ಎಷ್ಟು, ಡೊನೇಷನ್ ಸ್ಟೂಡೆಂಟ್ಸ್ ಎಂಬುದರ ವಿವರ ತರಿಸಿಕೊಡುತ್ತೇನೆ. ಹಾಗೆಯೇ ಕೆಲವರಿಗೆ ಸಿಕ್ಕಿಲ್ಲವೆಂದು ಹೇಳುತ್ತೀರಿ, ಆ ವಿವರವನ್ನೂ ತರಿಸಿ, ಬೇರೆ ಉತ್ತರವನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಮಲ್ಲಿಕಾರಿಗೌಡ ಎಸ್. ಪಾಟೀಲ್ .—ಹೊರನಾಡು ಕನ್ನಡಿಗರು, ಒಳನಾಡು ಕನ್ನಡಿಗರು ಎಂದು ಸುಳ್ಳು ಸರ್ಟಿಫಿಕೇಟ್ ಕೊಟ್ಟು ಕರ್ನಾಟಕದಲ್ಲಿ ಏನು ಶಿಕ್ಷಣ ಪಡೆಯುತ್ತಿದ್ದಾರೆ, ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದ ಕಾರ್ಯಕ್ರಮ ಏನು ? ಇದನ್ನು ನಿಲ್ಲಿಸದೇ ಹೋದರೆ, ಯಾರೂ ಕನ್ನಡಿಗರು ಇದ್ದಾರೆ ಅವರಿಗೆ ಸರಿಯಾದ ನ್ಯಾಯವನ್ನು ದೊರಕಿಸಿಕೊಡುವುದಕಾಗುವುದಿಲ್ಲ. ಇದನ್ನು ತಡೆಯುವುದಕ್ಕೆ ಯಾವ ಕಾರ್ಯಕ್ರಮ ಮಾಡುತ್ತೀರಿ. ಈಗಾಗಲೇ ಈ ವರ್ಷ ಆ ಸೀಟುಗಳನ್ನು ಕೈಬಿಟ್ಟಿದ್ದೀರಿ, ಈ ರೀತಿ ಕೈಬಿಡುವುದು ಸರಿಯಲ್ಲ ಎನ್ನತಕ್ಕಂಥ ಅಭಿಪ್ರಾಯ ಕೈಬಿಟ್ಟರೆ ನಮ್ಮ ಜನರಿಗೆ ತೊಂದರೆಯಾಗುತ್ತದೆ. ಕನ್ನಡ ಕಲಿಯುವುದಕ್ಕೆ ಹೋರಾಟ ಮಾಡಿದಂಥ ಜನ ನಮ್ಮ ರಾಜ್ಯದಲ್ಲಿದ್ದಾರೆ, ಅದ್ದರಿಂದ ಕನ್ನಡ ಜನರಿಗೇ ಕೊಡಬೇಕು. ಅದುದರಿಂದ, ಈ ಸೀಟ್ಟುಗಳ ಮರು ಪರಿಶೀಲನೆಮಾಡಿ, ಕನ್ನಡಿಗರಿಗೆ ಸೀಟುಗಳನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ .—ತಮ್ಮ ವಿಚಾರಗಳೆಲ್ಲವನ್ನೂ ಸೇರಿಸಿ, ಪರಿಶೀಲನೆಮಾಡಿ ತಮಗೆ ತಿಳಿಸುತ್ತೇನೆ.

ಶ್ರೀ ಡಿ. ಹಲಗೇಗೌಡ .—ಮಾನ್ಯ ಅಧ್ಯಕ್ಷರೇ, ಈ ವೈದ್ಯಕೀಯ ಕಾಲೇಜುಗಳಲ್ಲಿ ಪ್ರತಿವರ್ಷವೂ, ಕೂಡ ಸೀಟುಗಳನ್ನು ಏರಿಸಿಕೊಂಡು ಹೋಗುತ್ತಿರುವುದರಿಂದ, ಅನೇಕರು ಈಗಾಗಲೇ ಗ್ರಾಜುಯೇಟ್ಸ್ ಆಗಿರುವವರಿಗೆ ಕೆಲಸವಿಲ್ಲದೆ ಇರುವಾಗ, ಪ್ರತಿ ವರ್ಷ ಈ ರೀತಿ ಏರಿಸಿಕೊಂಡು ಮತ್ತೊಬ್ಬ ನಿರುದ್ಯೋಗಿ ವೈದ್ಯಕೀಯ ಪದವೀಧರರನ್ನು ತಯಾರು ಮಾಡುವುದರ ಜೊತೆಗೆ ಹಣ ಸಂಪಾದನೆಗೆ ಮಾರ್ಗವಾಗಿದೆ. ಈ ಮೆಡಿಕಲ್ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆ ಮತ್ತು ಸೀಟುಗಳನ್ನು ಹೆಚ್ಚಿಸಿಕೊಂಡು ಹೋಗುವಂತಾದ್ದು ಏನಿದೆ. ಇದನ್ನು ಅದಷ್ಟು ಮಟ್ಟಿಗೆ ಕಡಿಮೆ ಮಾಡುತ್ತೀರಾ, ಸೀಟುಗಳನ್ನು ಕಡಿಮೆಮಾಡಿ, ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆಮಾಡಿ, ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಪಡುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ .—ಸೀಟುಗಳನ್ನು ಕಡಿಮೆ ಮಾಡುವುದರಿಂದ ನಿರುದ್ಯೋಗ ಕಡಿಮೆಯಾಗುತ್ತದೆ ಎನ್ನುವುದರಲ್ಲಿ ನನಗೆ ನಂಬಿಕೆ ಇಲ್ಲ. ನಮ್ಮ ಪಾಪ್ಯುಲೇಷನ್ ಇಷ್ಟು ಜಾಸ್ತಿಯಾಗುತ್ತಾ ಇರುವುದರಿಂದ, ಓದುವ ಮಕ್ಕಳ ಸಂಖ್ಯೆ ಜಾಸ್ತಿ ಇರುವುದರಿಂದ ಹೆಚ್ಚಿಗೆ ಸೀಟುಗಳು ಬೇಕಾಗುತ್ತವೆ. ಡಾಕ್ಟರ್ಸ್ ಬೇಕಾಗುತ್ತಾರೆ, ಎಂಜಿನಿಯರ್ಸ್ ಬೇಕಾಗುತ್ತಾರೆ. ಆದುದರಿಂದ ಸೀಟುಗಳನ್ನು ಕಡಿಮೆ ಮಾಡುತ್ತೇವೆ ಎನ್ನುವಂತಹ ತಪ್ಪು ಭಾವನೆಗೆ ನಾವು ಹೋಗಬೇಕಾಗಿಲ್ಲ ಎಂಬುದು ನನ್ನ ಅಭಿಪ್ರಾಯ.